ಎಸ್.ಸಿ. ರಮೇಶ್, ಮೈಸೂರು
ಸೌಂದರ್ಯಸ್ಪರ್ಧೆಯಲ್ಲಿ ಸ್ಪರ್ಧಿಗಳು ನೇರವಾಗಿ ನಡೆಯದೆ ಸೊಟ್ಟಗಾಲಿನಲ್ಲಿ ನಡೆಯುವುದೇಕೆ?




ಸೊಂಟ ಬಳುಕಲು ನೆಟ್ಟಗಾಲಿಗಿಂತ ಸೊಟ್ಟಗಾಲೇ ಸೂಕ್ತವಂತೆ.

ಬಿ. ಚಂದ್ರೇಗೌಡ, ಬೆಂಗಳೂರು
ಗಾಳಿ ಮತ್ತು ಬೆಂಕಿಯಿಂದ ಮನುಷ್ಯನು ಕಲಿಯಬೇಕಾದ ಪಾಠ ಯಾವುದು?
ವಿಶ್ರಾಂತಿಗೆ ದಾಸನಾಗಬೇಡ; ಎಂತಹ ಸ್ಥಿತಿಯಲ್ಲೂ ತಲೆ ತಗ್ಗಿಸಬೇಡ ಎಂದು.

ಆನಂದಿ ಕಾರಂತ್, ಕಳ್ಳಿಗೆ ಗ್ರಾಮ
ಬದುಕಿನ ಮೂಲ ಉದ್ದೇಶ ಏನು?
ಭೂತಕ್ಕಿಂತ ಭವಿಷ್ಯ ಚೆನ್ನಾಗಿರುವಂತೆ ವರ್ತಮಾನವನ್ನು ರೂಪಿಸುವುದು.

ವಿ. ಹೇಮಂತಕುಮಾರ್, ಬೆಂಗಳೂರು
ಮನೆಯೊಡತಿಗೂ, ಮನದೊಡತಿಗೂ ವ್ಯತ್ಯಾಸವೇನು?



ಮನದೊಡತಿ ನಿಮಗಾಗಿ ಕಾಯುತ್ತಾಳೆ, ಮನೆಯೊಡತಿ ನಿಮ್ಮನ್ನು ಕಾಯುತ್ತಾಳೆ.

ಮಲ್ಲಿಕಾರ್ಜುನ, ಸುರಧೇನುಪುರ
ಸಮಯಾತೀತವಾಗಿ ಟೀವಿ ನೋಡುವವರಿಗೆ ಯಾವ ಬಿರುದು ನೀಡುವಿರಿ?
ಗೋಳುಗುಮ್ಮಟ, ಚಲದೃಶ್ಯದರ್ಶನೋನ್ಮತ್ತ, ಕಿರುತೆರೆಗೋಂದು, ಸ್ಕ್ರೀನ್ ಸ್ಟಿಕ್ಕರ್...

ಹೆಚ್.ವಿ. ಶ್ರೀಧರ್, ಬೆಂಗಳೂರು
ದೈಹಿಕವಾಗಿ ಬೆದರಿಸುವ ದರೋಡೆಕೋರರು, ಡಿಜಿಟಲ್ ದರೋಡೆಕೋರರಲ್ಲಿ ಯಾರು ಉತ್ತಮ?
ಉದ್ದೇಶವನ್ನು ಸ್ಪಷ್ಟಗೊಳಿಸುವ ಬೆದರಿಸುವವನೇ ಈರ್ವರೊಳುತ್ತಮನ್.

ಜಗದೀಶ ಹೊಸೂರು
ಸೀತಾಪಹರಣಗೈದ ಒಂದೇ ತಪ್ಪಿಗೆ ಇಂದಿನ ಕೋರ್ಟ್ ರಾವಣನಿಗೆ ಯಾವ ಶಿಕ್ಷೆ ವಿಧಿಸಬಹುದು?
ಹ್ಞ! ಸ್ವರ್ಣಮಯ ಲಂಕೆಯ ಅಧಿಪತಿಯ ಕೇಸು ಕೋರ್ಟಿಗೇ ಬರದೆ ಸ್ಟೇಷನ್ನಿನಲ್ಲೇ ಫೈಸಲಾಗುತ್ತದೆ.

ದಿನೇಶ್, ಗುಡ್ಡದೂರು
ನಿಮಗೆ ನಿದ್ರೆಯಲ್ಲೂ ಪ್ರಶ್ನೆಗಳಿಗೆ ಉತ್ತರ ಹೊಳೆಯುತ್ತಂತೆ ಹೌದಾ ರಾಮ್?
ಊಹೂಂ. ನನ್ನದು ಕನಸಿಲ್ಲದ, ಚಿಂತೆಯಿಲ್ಲದ ಗಾಢನಿದ್ರೆ.

ಗಂಗಾದೇವಿ, ಬೆಂಗಳೂರು
ಇಲ್ಲೊಬ್ಬರು ಆಂಟಿ 'ಮಾವನ ಸರಪಳಿ' ಎನ್ನುತ್ತಿರುವರಲ್ಲ?
ತಿಳಿಯಿತು! ಅತ್ತೆಯವರು ವಾಕಿಂಗ್ ಸಮಯದಲ್ಲಿ ಮಾವನ ಕತ್ತಿಗೆ ತೊಡಿಸುವ ವಸ್ತುವದು!

ವಸುಧಾ ಜೈಶಂಕರ್, ಬೆಂಗಳೂರು
ರಸಿಕನಾಡುವ ಮಾತು ಶಶಿ ಉದಯಿಸಿದಂತೆ. ರಾಜಕಾರಣಿಯ ಮಾತು?
ನೀರಿನ ಮೇಲಿನ ರಂಗೋಲಿಯಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಒಳ್ಳೆಯವರಾಗಬೇಕೋ, ಒಳ್ಳೆಯವರೆಂದು ಕರೆಸಿಕೊಳ್ಳಬೇಕೋ?
ಕರೆದು ಹಂಚಿಕೊಳ್ಳುವ ಕಾಗೆಯಷ್ಟು ಒಳ್ಳೆಯವರಾದರೂ ಸಾಕು.

ಆಶಾ ಅಪ್ರಮೇಯ, ದಾವಣಗೆರೆ
ಹೆಣ್ಣಿಗೆ ಹೆಣ್ಣೇ ಶತ್ರು ಎನ್ನುವಂತೆ ಗಂಡಿಗೆ ಗಂಡೇ ಶತ್ರು ಎನ್ನುವುದಿಲ್ಲವೇಕೆ?
ಅತ್ತೆ–ಸೊಸೆ ಆಡಿದಷ್ಟು ಜಗಳವನ್ನು ಮಾವ ಅಳಿಯ ಆಡಿಲ್ಲವಲ್ಲ.

ವಿಜಯಕುಮಾರಿ ಧನ್ಯನಾಥನ್, ಚೆನ್ನೈ
ಪಾಪಿ ಚಿರಾಯು – ಈ ನುಡಿಗಟ್ಟಿನ ಅರ್ಥವೇನು?
ಅವನು ಗುಡಿಸಿದಷ್ಟೂ ಬೀಳುತ್ತಲೇ ಇರುವ ಕಸದಂತೆ ಎಂದು.

## ಬಹುಮಾನಿತ ಪ್ರಶ್ನೆ

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಸಿಸಿ ಕ್ಯಾಮೆರಾಗಳು ಹೆಚ್ಚಾದಷ್ಟೂ ಮೋಸಗಳೂ ಹೆಚ್ಚಾಗುತ್ತಿವೆಯಲ್ಲ?
ಚರ್ಮವೇ ಹಾಗೆ; ಕಾನೂನು ಕ್ಯಾಮೆರಾ ಕೆಳಗೆ ನುಸುಳಿದರೆ ಚರ್ಮ ಲೆನ್ಸ್ ಕೆಳಗೆ ನುಸುಳುತ್ತದೆ.

ಹೆಚ್.ಎಮ್. ಚನ್ನವೀರಯ್ಯ, ಹೂವಿನಹಡಗಲಿ
ಆತ್ಮಸಾಕ್ಷಿ ಎಂದರೇನು?
ನಮ್ಮ ತಪ್ಪುಗಳನ್ನು ಹೆದರದೆ ಪ್ರಶ್ನಿಸಬಲ್ಲ ಏಕೈಕ ಆಂತರಿಕ ಶಕ್ತಿ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ಸಾಲವನು ಕೊಂಬಾಗ ಹಿಗ್ಗು, ನಗು. ಸಾಲ ತೀರದಿದ್ದಾಗ?
ಬಿಕ್ಕು, ಕೊರಗು.

ಸಿಕೆಜಿ, ಮುಂಡರಗಿ
ಕವಿಗಳು ಹೆಣ್ಣನ್ನು ಹೆಚ್ಚಾಗಿ ವರ್ಣನೆ ಮಾಡಿದಂತೆ ಗಂಡನ್ನು ವರ್ಣಿಸರೇಕೆ?



ಬಾಲ್ಯದಿಂದಲೂ ಹೆಣ್ಣನ್ನೇ ಹೆಚ್ಚಾಗಿ ದೃಷ್ಟಿಸಿ ನೋಡಿದ ಫಲ.

ಮೈಸೂರು ಕುಸುಮ, ಶ್ರವಣಬೆಳಗೊಳ
ನಿಮ್ಮ ಆದರ್ಶ ವ್ಯಕ್ತಿ ಯಾರು? ಏಕೆ?
ಬೆಳಗೆರೆ ಕೃಷ್ಣಶಾಸ್ತ್ರಿಗಳು. ಅವರಂತೆ ನಾನು ಆಗಲು ಸಾಧ್ಯವಿಲ್ಲವಾದ್ದರಿಂದ.

ಜಗದೀಶ ಬಿ. ಹೊಸೂರು, ಮೈಸೂರು
ಇತ್ತೀಚೆಗೆ ಸಹಕಾರಿ ಸಂಘಗಳ ಚುನಾವಣೆಗೆ ಸ್ಪರ್ಧಿಸುವವರ ಸಂಖ್ಯೆ ಏರಿದೆಯಲ್ಲ?
ನಿರ್ದೇಶಕರು 'ಗುಪ್ತನಿಧಿ' ರೂಪಿಸಿಕೊಳ್ಳಲು 'ಒಳ ಸಹಕಾರ' ಹೆಚ್ಚಿರುವುದೇ ಕಾರಣವಂತೆ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಹಬ್ಬ ಹರಿದಿನಗಳಲ್ಲಿ ಬರೀ ಮಹಿಳಾ ಮಂಡಳಗಳು ಕಾಣುತ್ತವೆ. ಪುರುಷ ಮಂಡಳಗಳು ಏಕಿಲ್ಲ?
ಬೆಳಗ್ಗೆ ಅಡುಗೆಮನೆಯಲ್ಲಿ, ಸಂಜೆ ಇಸ್ಪೀಟ್ ಕ್ಲಬ್ಬಲ್ಲಿ ಇಣುಕಿ ನೋಡಿ, ಕಾಣುತ್ತವೆ.

■ ರಾಮ್